# ಸುಖೀರಾಜ್ಯ ನಿರ್ಮಾಣದ ಚಿಂತನೆಗಳು

ಡಾ. ಎಂ. ರಾಚಪ್ಪಾಜಿ



Scanned with CamScanner

# Sukhiraja Nirmanada Chintanegalu

Written by :
**Dr. M. Rachappaji**
Lecturer in Ambedkar Studies
Dr. B.R.Ambedkar Research and Extension Centre
Manasagangotri, Mysuru.

Published by :
**Unnathi Prakashana**
# 2542, 2nd Floor, Hebbal 2nd Stage,
Near Renuka Yellamma Temple, Mysuru-17

| | | |
|---|---|---|
| **ISBN** | : | **978 - 81 - 940686 - 8 - 6** |
| Pages | : | xii + 248 + 4 = 264 |
| First Impression | : | 2020 |
| © | : | Author |
| Copies | : | 1000 |
| Price | : | Rs.264=00 |

| | | |
|---|---|---|
| ಪುಟಗಳು | : | xii + ೨೪೮ + ೪ = ೨೬೪ |
| ಮೊದಲ ಮುದ್ರಣ | : | ೨೦೨೦ |
| ಪ್ರತಿಗಳು | : | ೧೦೦೦ |
| © | : | ಲೇಖಕರದು |
| ಬೆಲೆ | : | ರೂ.೨೬೪=೦೦ |
| ಮುಖಪುಟ ವಿನ್ಯಾಸ | : | ಕಿರಣ್, ಮೈಸೂರು. |
| ಅಕ್ಷರ ಜೋಡಣೆ | : | ಉನ್ನತಿ ಗ್ರಾಫಿಕ್ಸ್, ಮೈಸೂರು. |
| ಮುದ್ರಣ | : | ಕಮಲ್ ಇಂಪ್ರೇಶನ್, ಮೈಸೂರು. |

Scanned with CamScanner

## ಕಾರುಣ್ಯ ಪ್ರಜ್ಞೆ ಬೋಧಿಸಿದ ಬುದ್ಧ

ಜಗತ್ತಿನ ಜಾಗತೀಕ ಸಮಕಾಲೀನ ಸಂದರ್ಭದಲ್ಲಿ ಮಾನವ ಸಮಾಜವು ಹಲವು-ಹತ್ತು ಬಿಕ್ಕಟ್ಟುಗಳನ್ನು ಎದುರಿಸುತ್ತಿವೆ. ಮತೀಯವಾದ, ಜಾತಿವಾದ, ಕೋಮುವಾದ ಹಾಗೂ ಭಯೋತ್ಪಾದನಾ ವಾದಗಳಂಥ ಮಾನಸಿಕ ಹಾಗೂ ದೈಹಿಕ ಹಿಂಸೆಯೂ ವಿವಿಧ ನೆಲೆಯ ಭೇದ-ಭಾವಗಳು ಇಡೀ ಸಮಾಜ ವನ್ನೇ ಆವರಿಸಿಕೊಂಡಿವೆ. ಇದರಿಂದಾಗಿ ಮಾನವಕುಲದಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನೇ ಹಾಳು ಮಾಡಿವೆ. ಇವೆಲ್ಲ ವಿಧ್ವಂಸಕ ಕೃತ್ಯಗಳಿಗೆ ಬುದ್ಧಗುರುವಿನ ಕಾರುಣ್ಯ ಪ್ರಜ್ಞೆಯನ್ನು ಪ್ರಧಾನವಾಗಿ ಸಾಧಿಸಲು ಸಾಧ್ಯ. ಬುದ್ಧಗುರು ಪ್ರಪ್ರಥಮ ಬಾರಿಗೆ ತನ್ನ ಮಧ್ಯಮ ಮಾರ್ಗದ ಮೂಲಕ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಸುಧಾರಣೆಯ ಬಗೆಗೆ ಚಿಂತಿಸಿ ಬೋಧಿಸಿದವರು. ಆದರೆ, ಇವರನ್ನು ಒಬ್ಬ ಧಾರ್ಮಿಕ ಚಿಂತಕ ಎಂಬ ಪರಿಕಲ್ಪನೆಯ ಮನಸ್ಸಿನಿಂದ ಆಲೋಚಿಸುವುದರಿಂದಾಗಿ ಬೌದ್ಧಧರ್ಮದ ಸ್ಥಾಪಕರು ಎಂಬುದಾಗಿ ಗುರುತಿಸಲಾಗುತ್ತಿರುವುದು ಸೀಮಿತವಾದಂಥ ಪರಿಜ್ಞಾನದ ಮನೋಭಾವನೆಯಾಗಿದೆ. ಆದ್ದರಿಂದ ಬುದ್ಧನ ಆದರ್ಶಮಯವಾದ ತತ್ವ ಚಿಂತನೆಗಳು ಹಾಗೂ ಮಧ್ಯಮ ಮಾರ್ಗವನ್ನು ಪರಿಭಾವಿಸುವ ಅಗತ್ಯವಿದೆ.

ಮಾನವಕುಲದ ಮುಂದೆ ಯಾವತ್ತಿನಿಂದಲೋ ಇರುವ ಆಯ್ಕೆಗಳು ಎರಡು. ಬುದ್ಧ ಮತ್ತು ಯುದ್ಧ.

Scanned with CamScanner